ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 180ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 30ನೆ ಏಪ್ರೆಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಚಾಜೇನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಚಾಜೇನಹಳ್ಳಿ ಗ್ರಾಮದಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 184ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 30ನೆ ಏಪ್ರೆಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಚಿಕ್ಕ ಗೊಲ್ಲಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಸದರೀ ಚಿಕ್ಕ ಗೊಲ್ಲಹಳ್ಳಿ ಗ್ರಾಮದಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 183ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕ್ಲೋಸ್‌ಪೇಟೆ ಈಸಬಾದಲ್ಲಿರುವ ವೈಶ್ಯರ ಕನ್ನಿಕಾಪರಮೇಶ್ವರೀ ದೇವಸ್ಥಾನಕ್ಕೆ ಸೇರಿದ ಪಾಳು ನಿವೇಶನದಲ್ಲಿ ಗಾಣಿಗರ ಅಪ್ಪಯ್ಯನ ಮಗ ವೆಂಕಟಗಿರಿ, ತಿಮ್ಮಯ್ಯನ ಮಗ ದೊಡ್ಡ ವೆಂಕಟ್ಟ, ಇವರು ಆಟವಾಡುವ ಕಾಲದಲ್ಲಿ ನಿವೇಶನದ ಗೋಡೆಯಲ್ಲಿ ಹೆಂಟೆ ಕೆಳಗೆ ಬಂದು ಸಣ್ಣ ಕುಡಿಕೆಯಲ್ಲಿ 15—10—06ರಲ್ಲು 81 ಕಂಠೀರಾಯಿ ಹಣ ಸಿಕ್ಕಿದ್ದಾಗಿ ತಾಲ್ಲೂಕು ಮೆ|| ಪೋಲೀಸ್ 20-16—10—06ನೆ ನಂ|| ಮೂಲು ಫೌರಂ ವಡೆನ ಹಾಜರಾಗಿರುತ್ತೆ. ಇದರ ಹಕ್ಕು ಬಾಧ್ಯತೆ ಉಳ್ಳವರು 1907ನೆ ನವಂಬರು ಮಾಹೆ ಆಖೈರು ಒಳಗಾಗಿ ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಸಬ್ ಡಿವೀಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲಿ ಹಾಜರಾಗಿ ತಮ್ಮ ಹಕ್ಕು ಸ್ಥಿರಪಡಿಸಿಕೊಳ್ಳುವ ಸದರಿ ಮೂಲು ಪಡಿಯಬಹುದು. ತಪ್ಪಿದಲ್ಲಿ ಸದರೀ ಮೂಲು ಸಿಕ್ಕಿದವರಿಗೆ ಪಾವತಿ ಮಾಡಲ್ಪಡುತ್ತೆ. ನಂತರ ಬರುವ ತಕರಾರುಗಳು ಅಂಗೀಕರಿಸುವದಿಲ್ಲಾ.

ಹೆಚ್. ಹೆಚ್. ಸ್ಪೆನ್ಸ್,
ಡೆಪ್ಯೂಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಕೋಲಾರ ತಾಲ್ಲೂಕು ಹೋಳೂರು ಹೋಬಳಿ ಜೋಡಿ ಬ್ಯಾಲಹಳ್ಳಿ ಗ್ರಾಮವು 1907ನೆ ಜೂನ್ 19ನೆ ತಾರೀಖಿನಲ್ಲಿ ಕೋಲಾರ ತಾಲ್ಲೂಕು ಈಚೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಪರಾ—ಹೆಚ್ಚು ತಪಶೀಲಿಗೆ 1907ನೆ ಇಸವಿ ಮೇ ಮಾಹೆ 16ನೆ ಮರ್ಕುಂನೆ ಮೈಸೂರು ಗೆಜೆಟ್ಟಿನ IIನೆ ಭಾಗದ 203ನೆ ಪುಟದಲ್ಲಿ ಪ್ರಯಿಷಾಗಿರುವ ಇಸ್ತಿಹಾರ್‌ನಾಮೆಯನ್ನು ನೋಡಬಹುದು.

ಸಿ. ತ್ರೈಕಂಠೇಶ್ವರ ಐಯ್ಯರ್,
ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 30ನೆ ಏಪ್ರೆಲ್ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿಗೆ ಸೇರಿದ ಸರ್ವಮಾನ್ಯ ಮಾಚವಳ್ಳಲು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ರ ಈಚೇರಿಯಲ್ಲಿ 1907ನೆ ಜೂನ್ ಮಾಹೆ 25ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರು ಂ 19ನೆ ನಂಬರ್ ಮೈಸೂರು ಗೆಜೆಟ್ಟಿನೆ IIನೆ ಭಾಗದ 185ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯೂಟಿ ಕಮಿಷನರ್.